
DECCAN HERALD
Mangaluru, Monday December 4, 2017
Pages 18 Vol 20 No 334 ₹6.00 M www.deccanherald.com

CENTRAL LIBRARY



Supermoon shines over Karnataka






# AICTE to hold test for students whose degrees were suspended

**NEW DELHI, DHNS:** The All India Council for Technical Education (AICTE) has opened registration of the students of four deemed-to-be-universities for a test whose engineering degrees and diplomas obtained through distance education mode were suspended by the Supreme Court in a recent verdict last month.

"The last date for online registration of the students, willing to appear in the test to get their qualifications redeemed, is January 15, 2018, till 5 pm," the AICTE said issuing a notification for the test.

Lakhs of students are expected to take the test who obtained their engineering degree and diplomas through correspondence course from the JRN Rajasthan Vidyapeeth, Rajasthan; Institute of Advanced Studies in Education, Rajasthan; Allahabad Agriculture Research Institute, Allahabad; and Vinayaka Mission's Research Foundation, Tamil Nadu between 2001-2005.

## SC order

In a hard-hitting judgement on November 3, the Supreme Court suspended the engineering degrees and diplomas granted by these four deemed-to-be-universities to their students between 2001-2005.

The court also directed the AICTE to conduct a test, both written and practical, for these students, holding that the engineering degrees and diplomas of those failing to clear the examinations will stand cancelled.

The apex court also ordered for "a thorough investigation" into the case by the CBI, holding that the grant of ex-post-facto approval to the four institutions correspondence course in engineering and technology by the University Grants Commission (UGC) was "incorrect and illegal."

ಸೋಮವಾರ 4.12.2017
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
51 ವರ್ಷ • ಸಂಚಿಕೆ 334 • ಪುಟ 12+4 • ಬೆಲೆ ₹5
epaper.kannadaprabha.in

ಕನ್ನಡಪ್ರಭ
ನೇರ. ದಿಟ್ಟ. ನಿರಂತರ

ಸಿಎಂ ಸಿದ್ದು ಪ್ರಚಾರ ಯಾತ್ರೆಗೆ ಕ್ಯಾರವಾನ್ ಬಸ್ ↘7

ಪಾಕ್‌ಗೆ ಸಡ್ಡು: ಇರಾನ್‌ನಲ್ಲಿನ ಭ… ಬಂದರು ಲೋಕಾ…



6ನೇ ದ್ವಿಶ…
ಮತ್ತೆ ದಾ…
6 ಡಬಲ್ ಸೆಂಚುರಿ… ಎಂಬ ಕೀರ್ತಿ ವಿರಾ… ದಾಖಲೆ ಮುರಿದ ಭ… ಗಳಿಸಿರುವ ಬ್ರಾಡ್ಮನ…

CENTRAL LIBRARY

ಕನ್ನಡಪ್ರಭ
ಸಂಪಾದಕೀಯ

# ವಿದ್ಯಾರ್ಥಿ ಕೊರತೆಯ ಬಿಇ ಕಾಲೇಜು ಮುಚ್ಚುವುದೇ ಸರಿ

ಒಂದು ಕಾಲದಲ್ಲಿ ವೃತ್ತಿಪರ ಶಿಕ್ಷಣಕ್ಕೆ ಭಾರೀ ಬೇಡಿಕೆ ಇತ್ತು. ದ್ವಿತೀಯ ಪಿಯುಸಿಯ ಬಳಿಕ ಎಂಜಿನಿಯರಿಂಗ್ ಕೋರ್ಸ್‌ಗೆ ಸೇರಬೇಕೆಂದರೆ ತುಂಬ ಕಷ್ಟಪಡಬೇಕಿತ್ತು. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೂ ಸೀಟು ಸಿಗುತ್ತಿರಲಿಲ್ಲ. ಕಾಲ ಬದಲಾಯಿತು. ಕರ್ನಾಟಕವೂ ಸೇರಿದಂತೆ ದೇಶಾದ್ಯಂತ ಎಂಜಿನಿಯರಿಂಗ್ ಕಾಲೇಜುಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡವು. ಎಷ್ಟೋ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳೂ ಇರುತ್ತಿರಲಿಲ್ಲ, ಬೋಧಕ ಸಿಬ್ಬಂದಿಯೂ ಇರುತ್ತಿರಲಿಲ್ಲ. ಎಂಜಿನಿಯರಿಂಗ್ ಶಿಕ್ಷಣ ಪಡೆದವರೂ ನಿರುದ್ಯೋಗಿಗಳಾಗಿ ಅಲೆಯುವ ಸ್ಥಿತಿ ನಿರ್ಮಾಣವಾಯಿತು. ಎಂಜಿನಿಯರಿಂಗ್ ಕಾಲೇಜುಗಳು ಹೆಚ್ಚು ಸ್ಥಾಪನೆಗೊಂಡಿದ್ದು ಮತ್ತು ಉದ್ಯೋಗದ ಭರವಸೆ ಇಲ್ಲದುದು ಪ್ರವೇಶ ಪಡೆಯುವವರ ಸಂಖ್ಯೆಯಲ್ಲಿ ಗಣನೀಯವಾಗಿ ಕೊರತೆ ಕಂಡಿದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯು 2018-19ನೆ ಸಾಲಿಗೆ ಸುಮಾರು 300ಕ್ಕೂ ಅಧಿಕ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ಸೂಚಿಸಲಿದೆ. ಇದರಲ್ಲಿ ಕರ್ನಾಟಕದ ಇಪ್ಪತ್ತು ಕಾಲೇಜುಗಳೂ ಸೇರಿವೆ.

ಇದಕ್ಕೆ ಮಾನದಂಡ ಕಳೆದ ಐದು ವರ್ಷಗಳಲ್ಲಿ ಇವುಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಪ್ರಮಾಣ. ನಿಗದಿತ ಪ್ರಮಾಣಕ್ಕಿಂತ ಶೇ.30ಕ್ಕೂ ಕಡಿಮೆ ಪ್ರವೇಶವಾಗಿದ್ದರೆ ಅವುಗಳನ್ನು ಮುಚ್ಚಬೇಕಾಗುತ್ತದೆ. ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯು ಇನ್ನೂ 500 ಎಂಜಿನಿಯರಿಂಗ್ ಕಾಲೇಜುಗಳ ಸ್ಥಿತಿಗತಿಯನ್ನು ಪರಿಶೀಲಿಸುತ್ತಿದೆ. ದೇಶದಲ್ಲಿ ಸುಮಾರು ಮೂರು ಸಾವಿರ ಎಂಜಿನಿಯರಿಂಗ್ ಕಾಲೇಜುಗಳಿವೆ. ಇವುಗಳ ಪ್ರವೇಶ ಸಾಮರ್ಥ್ಯ 13.6 ಲಕ್ಷ ವಿದ್ಯಾರ್ಥಿಗಳು. ಇವುಗಳಲ್ಲಿ ಸುಮಾರು 800 ಕಾಲೇಜುಗಳಲ್ಲಿ ಅವುಗಳ ಪ್ರವೇಶ ಸಾಮರ್ಥ್ಯದ ಅರ್ಧಕ್ಕೂ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. 150 ಕಾಲೇಜುಗಳಲ್ಲಿ ಶೇ.20ಕ್ಕೂ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಪ್ರವೇಶ ನಿರಾಕರಿಸಲಾಗುವ ಕಾಲೇಜುಗಳಲ್ಲಿ ಈಗ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ತಮ್ಮ ಪದವಿ ಮುಗಿಸುವವರೆಗೆ ಅಲ್ಲಿಯೇ ಅಭ್ಯಾಸ ಮುಗಿಸಲು ಅವಕಾಶ ನೀಡಲಾಗುತ್ತದೆ. ಅಲ್ಲದೆ ಈ ಕಾಲೇಜುಗಳು ಪಾಲಿಟೆಕ್ನಿಕ್‌ಗಳಾಗಿ ಬದಲಾಗಲು, ಇಲ್ಲವೆ ಬೇರಾವುದೇ ವೃತ್ತಿ ಕೌಶಲ್ಯದ ತರಗತಿಗಳನ್ನು ನಡೆಸುವುದಕ್ಕೆ ಅನುಮತಿಯನ್ನು ನೀಡಲಾಗುವುದಂತೆ.

> ಶಿಕ್ಷಣ ಇಂದು ಹಣಮಾಡುವ ದಂಧೆಯಾಗಿ ಪರಿವರ್ತನೆಯಾಗಿರುವಾಗ, ರಾಜಕಾರಣಿಗಳ ಪರ್ಯಾಯ ಉದ್ಯೋಗವಾದಾಗ ಗುಣಮಟ್ಟದಲ್ಲಿ ಕುಸಿತ ಕಾಣುತ್ತದೆ.

ಶಿಕ್ಷಣದ ಗುಣಮಟ್ಟ ಕಡಿಮೆಯಾದಾಗ ಇಲ್ಲವೆ ಬೇಡಿಕೆಗಿಂತ ಅಧಿಕ ಪೂರೈಕೆಯಾದಾಗ ವಿದ್ಯಾರ್ಥಿಗಳಲ್ಲಿ ಸಹಜವಾಗಿಯೇ ನಿರಾಸಕ್ತಿ ಮೂಡುತ್ತದೆ. ಶಿಕ್ಷಣ ಇಂದು ಹಣಮಾಡುವ ದಂಧೆಯಾಗಿ ಪರಿವರ್ತನೆಯಾಗಿರುವಾಗ, ರಾಜಕಾರಣಿಗಳ ಪರ್ಯಾಯ ಉದ್ಯೋಗವಾದಾಗ ಗುಣಮಟ್ಟದಲ್ಲಿ ಕುಸಿತ ಕಾಣುತ್ತದೆ. ವಿದ್ಯಾರ್ಥಿಗಳು ಗುಣಮಟ್ಟವಿಲ್ಲದ ಕಾಲೇಜುಗಳಲ್ಲಿ ಪ್ರವೇಶ ಪಡೆಯುವುದಕ್ಕೆ ಇಷ್ಟಪಡುವುದಿಲ್ಲ. ಪ್ರಕೃತಿಯಲ್ಲಿ ಬಲಿಷ್ಠವಾದದ್ದು ಮಾತ್ರ ಉಳಿದುಕೊಳ್ಳುತ್ತದೆ. ಇದು ನಿಸರ್ಗ ಸಹಜ ನ್ಯಾಯ. ಇದು ಇಂಜಿನಿಯರಿಂಗ್ ಕಾಲೇಜುಗಳಿಗೂ ಅನ್ವಯಿಸುತ್ತವೆ. ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುವ ಇಂಥ ಸಂಸ್ಥೆಗಳ ಬಗ್ಗೆ ಯಾವುದೇ ಮರುಕ ತೋರಿಸುವ ಅಗತ್ಯವಿಲ್ಲ. ಜೊತೆಯಲ್ಲಿ ವೃತ್ತಿ ಶಿಕ್ಷಣ ಕಲಿತವರು ಯಾರೂ ನಿರೋದ್ಯೋಗಿಗಳಾಗಿ ಇರಕೂಡದು. ಈ ಸಂಬಂಧದಲ್ಲಿ ವೃತ್ತಿ ಶಿಕ್ಷಣ ಮಂಡಳಿಯು ಪಠ್ಯಕ್ರಮದಲ್ಲಿ ಬದಲಾವಣೆ ತಂದು, ಅವರು ಕಲಿಯುತ್ತಿರುವಾಗಲೇ ಉದ್ಯೋಗದಾತರ ಗಮನ ಸೆಳೆಯುವಂಥ ಇಂಟರ್ನ್‌ಶಿಪ್ ಮಾಡುವ ಅವಕಾಶವನ್ನು ಒದಗಿಸಬೇಕು. ಕೆಲವು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಡಿ.ಇಡಿ ಕೋರ್ಸ್ ಮತ್ತು ಬಿ.ಇಡಿ ಕೋರ್ಸ್‌ [illegible] ಕೋರ್ಸ್‌ಗೂ ಪ್ರವೇಶ ನಿಲ್ಲಿಸಲಾಗಿತ್ತು. ಕಾರಣ ಉದ್ಯೋಗ ಮಾರುಕಟ್ಟೆಯಲ್ಲಿ ಅಗತ್ಯಕ್ಕಿಂತ ಹೆಚ್ಚಿಗೆ ಈ ಪದವಿ ಪಡೆದವರು ಇದ್ದುದು.

ಕಾಲೇಜುಗಳನ್ನು ಮುಚ್ಚಿಸುವುದರ ಜೊತೆಗೆ ಎಂಜಿನಿಯರಿಂಗ್ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಸಂಬಂಧದಲ್ಲಿಯೂ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮತ್ತು ಮಾನವ ಸಂಪನ್ಮೂಲ ಸಚಿವಾಲಯ ಚಿಂತಿಸುವುದು ಅಗತ್ಯ. ಬಹುತೇಕ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿ ಸೂಕ್ತವಾದ ವಿದ್ಯಾರ್ಹತೆಯನ್ನು ಹೊಂದಿರುವುದಿಲ್ಲ. ಎಂ.ಟೆಕ್ ಮತ್ತು ಪಿಎಚ್.ಡಿ ಮಾಡಿದವರು ಕಲಿಸುವುದಕ್ಕೆ ಬರುತ್ತಾರೆ. ಆದರೆ ಅವರಿಗೆ ಕಲಿಸುವ ವಿಧಾನ ಗೊತ್ತಿರುವುದಿಲ್ಲ. ಅವರಿಗಾಗಿ ಅಲ್ಪಾವಧಿಯ ಕೋರ್ಸ್ ಆರಂಭಿಸುವ ವಿಚಾರ ಮಂಡಳಿಯಲ್ಲಿದೆ. ಅದು ಆದಷ್ಟು ಶೀಘ್ರ ಜಾರಿಯಾಗಲಿ.